QUESTION FOR ANSWERS ON THE DAY
(but not taken up)

Return of the Commuted Amount to Pensioners

369. SRI M. ABDUL LATEEF (Kolar).—Will the Minister for Finance be pleased to state:—

(a) whether the Government is aware that under the Commutation of Pension Scheme the commuted amount from the pension is not paid to the pensioners even after the entire advanced amount is recovered ;

(b) whether the Government intend to consider the restoration and payment of such commuted amounts to such pensioners in view of the advanced age of pensioners on purely humanitarian grounds ?

SRI S. M. YAHYA (Minister for Finance).—

(a) In the scheme of commutation, the amount paid is not treated as an advance and therefore it is not correct to refer to the recovery of any advance. What is paid is a final payment in lieu of the portion of the pension that is commuted at the request of the applicant.

(b) No.

PAPERS LAID ON THE TABLE

SRI V. M. KUSHNOOR (Minister of State for Co-operation).—Sir, I lay on the Table of the House Order No. RDC 54 EIC 77, dated 27th June 1978, Exemption of Coorg Coffee Growers Co-operative Societies Limited Mercara from the provisions of sub-section (3) of section 17 of Karnataka Co-operative Societies Act, 1959, under Sec. 130 of the Karnataka Co-operative Societies Act, 1959.

MR. SPEAKER.—Papers laid. Now Mr. G. P. Vadeyaraj can raise his subject

Matter under Rule 312

re.—Inclusio of higher castes in the list of SCs and STs

†ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಕರ್ನಾಟಕದಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ವಿದ್ಯಾರ್ಥಿಗಳಿಗೆ ಆಗುತ್ತಿರತಕ್ಕಂಥ ತೊಂದರೆಗಳ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ತಮ್ಮ ಅನುಮತಿಯನ್ನು ಕೋರುತ್ತೇನೆ. ಸ್ವಾಮಿ ತಮಗೆ ಗೊತ್ತಿರುವ ಹಾಗೆ ಷೆಡ್ಯೂಲ್‌ಕಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ ಏರಿಯಾ ಅಮೆಂಡ್‌ಮೆಂಟ್ ಆಕ್ಟ್ ೧೯೭೬ರಲ್ಲಿ ಭಾರತ ದೇಶದಲ್ಲಿ ೨೭ನೇ ತಾರೀಖು ಜುಲೈ ೧೯೭೭ ರಂದು ಜಾರಿಗೆ ಬಂದಿತು. ಅದರ ಉದ್ದೇಶವೇನೆಂದರೆ

ಆಯಾ ರಾಜ್ಯಗಳಲ್ಲಿ ಷೆಡ್ಯೂಲ್‌ಕಾಸ್ಟ್ ಷೆಡ್ಯೂಲ್‌ಟ್ರೈಬ್ಸ್ ಏರಿಯಾ ಎಂದು ಏನು ಇದೆ ಅದು ಜಾರಿಯಲ್ಲಿ ಇದ್ದು ಷೆಡ್ಯೂಲ್‌ಕಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ ಏರಿಯಾ ಎಂದು ರಿಸ್ಟ್ರಿಕ್ಷನ್ ಇತ್ತು. ಇದನ್ನು ಏರಿಯಾ ರಿಸ್ಟ್ರಿಕ್ಷನ್ ತೆಗೆದುಕೊಳ್ಳುವುದಕ್ಕೆ ಮಾತ್ರ ಸ್ಪಷ್ಟವಾಗಿತ್ತು ಆಯಾ ರಾಜ್ಯಗಳಲ್ಲಿ ೧೯೫೬ರಲ್ಲಿ ರಿಆರ್ಗನೈಸ್ ಸ್ಟೇಟ್ ಆದಮೇಲೆ ಅನಾಮಲಿ ಏನು ಇದೆ ಅದನ್ನು ತೆಗೆದುಕೊಳ್ಳುವುದಕ್ಕೋಸ್ಕರವಾಗಿ ೧೯೭೬ರಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಅಮೆಂಡ್‌ಮೆಂಟ್ ಆಕ್ಟನ್ನು ಕೇಂದ್ರ ಸರ್ಕಾರದಲ್ಲಿ ಪಾರ್ಲಿಮೆಂಟ್ ಮುಖಾಂತರ ಅನ್ ಆಕ್ಟ್ ಮಾಡಲಾಯಿತು. ಅದನ್ನು ಜಾರಿಗೆ ಕೊಟ್ಟದ್ದು ಜುಲೈ ೧೯೭೭ರಲ್ಲಿ ಕರ್ನಾಟಕದ ಬಗ್ಗೆ ಹೇಳಬೇಕಾದರೆ ಹಳೆ ಮೈಸೂರಿನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್‌ಟ್ರೈಬ್ಸ್ ಎಂದು ಏನು ಇತ್ತು ಅವುಗಳಿಗೆ ಸಂಬಂಧಪಟ್ಟಂತೆ ಹೊಸಮೈಸೂರಿನಲ್ಲಿಯೂ ಕೂಡ ರಿಸ್ಟ್ರಿಕ್ಷನ್ ಇರಬೇಕೆಂದು ಹೇಳಿ ಹೊಸ ಮೈಸೂರು ೭-೮ ಜಿಲ್ಲೆಗಳಲ್ಲಿ ಕೂರ್ಗ್ ಮತ್ತು ಮೈಸೂರು ಜಿಲ್ಲೆಯಲ್ಲಿ, ಇಡಿ ರಾಜ್ಯಕ್ಕೆ ಅನ್ವಯಿಸುವಂತೆ ಆಕ್ಟ್ ಜಾರಿಗೆ ಬಂದಿತು. ಅದು ಬಂದಮೇಲೆ ಅದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಸಿನಾನಿಮಸ್ ಮಾಡಬೇಕಾಗಿತ್ತು. ಅದರೆ ರಾಜ್ಯ ಸರ್ಕಾರದವರು ಅಂದರೆ ಕರ್ನಾಟಕ ಬಗ್ಗೆ ಹೇಳಬೇಕಾದರೆ ಇದು ಜುಲೈನಲ್ಲಿ ಜಾರಿಗೆ ಬಂದರೂ ನವೆಂಬರ್ ಡಿಸೆಂಬರ್‌ನಲ್ಲಿ ಜಾತಿಗಳಿಗೆ ಸಂಬಂಧಪಟ್ಟಂತೆ ಸಿನಾನಿಮಸ್ ತೆಗೆದುಹಾಕಲಿಲ್ಲ. ಮತ್ತು ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರದವರು ಸರ್‌ಕ್ಯುಲರ್‌ನ್ನು ಕೂಡ ಕಳುಹಿಸಿಲ್ಲ. ಇದರಿಂದ ಹಳೇ ಮೈಸೂರು ಬಾಗದಲ್ಲಿರುವ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ನವರಿಗೆ ಬಹಳ ಅನ್ಯಾಯವಾಗುತ್ತಿದೆ. ಅವರಿಗೆ ಈವತ್ತಿನದಿವಸ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅಡ್ಮಿಷನ್ ಸಿಗುತ್ತಾ ಇಲ್ಲ. ಅಡ್ಮಿಷನ್ ತೆಗೆದುಕೊಳ್ಳಬೇಕಾದರೆ, ನೌಕರಿಗೆ ಅರ್ಜಿಯನ್ನು ಹಾಕಬೇಕಾದರೆ ಸರ್ಟಿಫಿಕೇಟ್ ಬೇಕಾಗಿರುತ್ತದೆ. ಸರ್ಟಿಫಿಕೇಟ್‌ನ್ನು ಕೇಳಿದರೆ ಅಧಿಕಾರಿಗಳು ಕೊಡುವುದಿಲ್ಲ. ಅಧಿಕಾರಿಗಳ ಈ ಆಕ್ಟ್ ಬಗ್ಗೆ ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬುದು ನಮ್ಮ ವಾದವಾಗಿರುತ್ತದೆ. ಕೇಂದ್ರ ಸರ್ಕಾರದವರು ಯಾವುದು ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಎಂದು ರೆಕಮೆಂಡೇಶನ್‌ಮಾಡಿರುತ್ತದೆ ಅದನ್ನು ಒಪ್ಪಿಕೊಂಡು, ಅಂಥ ಜಾತಿಗಳಿಗೆ ಸಂಬಂಧಪಟ್ಟ ರಾಜ್ಯಗಳಲ್ಲಿ ಅದಕ್ಕೆ ಅನ್ವಯಿಸತಕ್ಕಂಥ ಹೆಸರುಗಳನ್ನು ತಿಳಿಯಪಡಿಸಿದೆ ಒಂದು ಕನ್‌ಫ್ಯೂಷನ್‌ಗೆ ಕಾರಣವಾಗಿರುವುದರಿಂದ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ಜನಾಂಗದವರಿಗೆ ಸರ್ಟಿಫಿಕೇಟ್ ದೊರೆಯುತ್ತಾ ಇಲ್ಲ. ಜೂನ್‌ತಿಂಗಳಲ್ಲಿ ಎಜ್ಯುಕೇಶನ್ ಇನ್‌ಸ್ಟಿಟ್ಯೂಗಳು ತೆರೆಯುವುದು ಇದ್ದು ಸರ್ಟಿಫಿಕೇಟ್ ಕಡ್ಡಾಯವಾಗಿರುವುದರಿಂದ ಹೊಸ ಮೈಸೂರಿನಲ್ಲಿರತಕ್ಕಂಥವರಿಗೆ ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಈ ದಿಶೆಯಲ್ಲಿ ನಮ್ಮ ಸರ್ಕಾರದವರ ಗಮನಕ್ಕೆ ತಂದಾಗ ಮಾನ್ಯ ಮಂತ್ರಿಗಳು ಈ ವಿಷಯವನ್ನು ಪರಿಶೀಲನೆ ಮಾಡುವುದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಲಾಗಿದೆ ಎಂಬುದಾಗಿ ಹೇಳಿದರು. ಆ ರೀತಿ ಕಮಿಟಿಯು ರಚನೆಯಾದ ಮೇಲೆ ಆ ಕಮಿಟಿಯವರು ಮೀಟಿಂಗ್‌ಗಳನ್ನು ನಡೆಸಿ ತನ್ನ ವರದಿಯನ್ನೂ ಕೂಡ ಸರ್ಕಾರಕ್ಕೆ ಕೊಡಲಾಗಿದೆ, ಆ ವರದಿ ಸರ್ಕಾರದ ಮುಂದಿದ್ದರೂ ಸರ್ಕಾರದವರು ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ಇದರಿಂದ ನನಗನ್ನಿಸುತ್ತದೆ, ಹರಿಜನ ಗಿರಿಜನರ ಸಮಸ್ಯೆ ನಮ್ಮರಾಜ್ಯಕ್ಕೇ ಸಂಬಂಧಪಟ್ಟಿರುವುದರಿಂದ ಅವರುಗಳ ಅಭಿವೃದ್ಧಿ ಸಂಪೂರ್ಣ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿರುವುದರಿಂದ ಅವರುಗಳ ಅಭಿವೃದ್ಧಿಗೆ ರಾಜ್ಯದ ಹಣ ಖರ್ಚಾಗುತ್ತಿರುವುದರಿಂದ ರಾಜ್ಯಸರ್ಕಾರದವರು ಈ ಎರಡು ಜಾತಿಗಳನ್ನು ಬೇರೆ ಯಾವ ರೀತಿಯಿಂದಲೂ ಕರೆಯುವುದಾದರೆ ಅದಕ್ಕೆ ಸ್ಪಷ್ಟೀಕರಣ ಮಾಡತಕ್ಕಂಥಾದ್ದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ರಾಜ್ಯಸರ್ಕಾರದವರು ಈ ಬಗ್ಗೆ ನವೆಂಬರ್ ೧೯೭೭ರಲ್ಲಿ ಒಂದು ಸುತ್ತೋಲೆಯನ್ನು ನೀಡಿರುವುದರಿಂದ ಬಹಳಷ್ಟು ಅನ್ಯಾಯಕ್ಕೆ ಕಾರಣವಾಗಿದೆ. ಇದಕ್ಕೆ ಕೇಂದ್ರ ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ. ಇದರಿಂದ ಹರಿಜನ ಗಿರಿಜನರಿಗೆ ಈ ರಾಜ್ಯದಲ್ಲಿ ಪ್ರಮಾಣಪತ್ರಕೊಡುವುದಕ್ಕಾಗುವುದಿಲ್ಲ. ಇದರಿಂದ ಎಜುಕೇಷನ್ನಿನ ಅಡ್ಮಿಷನ್ನಿಗೆ ಬಹಳಷ್ಟು ತೊಂದರೆಯಾಗಿದೆ. Every minute injustice is being perpetrated and they are being denied rights and justice. ಇದಕ್ಕೆ ಅಧಿಕಾರಿಗಳು ಬಹಳಷ್ಟು ಕಾರಣರಾಗಬಹುದು ಎಂಬ ಸಂಶಯವನ್ನು ನಾನು ವ್ಯಕ್ತಪಡಿಸಬೇಕಾಗಿದೆ. ಇದರ ಬಗ್ಗೆ ಅಧಿಕಾರಿಗಳ ಗಮನಕ್ಕೆ ಹೊಸ ಮೈಸೂರಿನ ಭಾಗದಲ್ಲಿ ವಾಸ ಮಾಡುತ್ತಿರುವ ಹರಿಜನ ಗಿರಿಜನರಿಗೆ ಬಹಳಷ್ಟು ತೊಂದರೆಯಾಗಿದೆ ಎಂಬುದಾಗಿ ತಿಳಿಸಿದ್ದರೂ ಕೂಡ ಇದುವರೆಗೂ ಯಾವ ರೀತಿಯಾದ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಮತ್ತು ಇತರೇ ಎಲ್ಲಾ ಜನಗಳಿಗೂ ಬಹಳ ಅನ್ಯಾಯವಾಗಿದೆ. ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಸರ್ಕಾರದ ಪತಿಯಿಂದ ಈ ಬಗ್ಗೆ ತೀವ್ರ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದಾರೆಂಬ ಸಂಗತಿಯೂ

ಹೌದು. ಆದರೂ ತಡವಾಗುತ್ತಿರುವುದರಿಂದ ಅನ್ಯಾಯಗಳು ಜಾಸ್ತಿಯಾಗುತ್ತಿರುವುದರಿಂದ ತಮ್ಮ ಮುಖಾಂತರ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೇನಂದರೆ ತಕ್ಷಣವೇ ಇದರ ಬಗ್ಗೆ ಸೂಕ್ತ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಜಿ. ಬಸವಣಪ್ಪ (ಹೊಳೆಹೊನ್ನೂರು).—ಮಾನ್ಯ ಅಧ್ಯಕ್ಷರೇ, ಎಸ್. ಸಿ ಮತ್ತು ಎಸ್. ಟಿ. ಲಿಸ್ಟ್‌ಗಳ ಸೀರಿಯಲ್ ನಂಬರ್ ೧೯ರಲ್ಲಿ ಬೇಡ ಜಂಗಮ, ಮತ್ತು ಬುಡಗ ಜಂಗಮ ಎಂಬುದು ಇದೆ. ಇದನ್ನು ಉಪಯೋಗಿಸಿಕೊಂಡು ಲಿಂಗಾಯಿತ ಕೋಮಿಗೆ ಸೇರಿದೆ ಜಂಗಮರು ಎಸ್. ಸಿ., ಎಸ್. ಟಿ. ಸರ್ಟಿಫಿಕೇಟ್‌ಗಳನ್ನು ಪಡೆಯುತ್ತಾರೆ. ಇದು ರಾಜ್ಯದಲ್ಲಿ ಒಂದು ಗೊಂದಲಮಯ ವಾತಾವರಣ ಉಂಟಾಗಿದೆ. One of the main criteria for being included in the Scheduled Castes' list is extreme social, economic and educational backwardness. ಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ಲಾರಿಫಿಕೇಷನ್ ಕೊಡತಕ್ಕಂಥಾದ್ದು ಅತ್ಯಂತ ಅವಶ್ಯಕ. ಮತ್ತು ಸೂಕ್ತ ತಿಳುವಳಿಕೆಯನ್ನು ಕೊಡಬೇಕಾದುದು ಅತ್ಯವಶ್ಯಕ ಎಂದು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಲೋಕಸಭೆ ೧೯೭೬ರಲ್ಲಿ, ನಿಮ್ಮ ವರ್ಗದಲ್ಲಿರುವ ಕೆಲವೊಂದು ಕೋಮುಗಳ ಅನಾಮಲಿ (Anamaly)ಯನ್ನು ಹೋಗಲಾಡಿಸಿ, ಅದು ಜುಲೈ ೧೯೭೭ ರಿಂದ ಜಾರಿಗೆ ಬಂದಿದೆ ನಿಮ್ಮ ವರ್ಗದ ಈ ಲಿಸ್ಟ್‌ನಲ್ಲಿ "ಭೋವಿ" ಎಂಬುದು ಇದೆ. ಬೋವಿ ಎಂದರೆ ವಡ್ಡರು ಕಲ್ಲು ವಡ್ಡರು ಮಣ್ಣು ವಡ್ಡರು ಈ ಜಾತಿಗೆ ಸೇರಿದವರೆಂಬುದು ಸರ್ವ ವಿಧಿತವಾದ ವಿಷಯ. ಅದೇ ರೀತಿ ಬಣಜಾರು ಅಂದರೆ ಲಂಬಾಣಿ ರಾಜ್ಯದಾದ್ಯಂತ Synonym ಬಗ್ಗೆ ಗೊಂದಲಮಯ ಸನ್ನಿವೇಶ ಉಂಟಾಗಿದೆ. ಇದಕ್ಕೆ ಆದಷ್ಟು ಬೇಗ ಸಮಜಾಯಿಷಿ ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿದಾಗ ಅದಕ್ಕೆ Synonym ಕಮಿಟಿ ಮಾಡಲಾಗಿದೆ ಎಂಬುದಾಗಿ ಹೇಳಿದರು. ಇದರ ಬಗ್ಗೆ ಸರ್ಕಾರ ಸೂಕ್ತ ಸುತ್ತೋಲೆಯನ್ನು ಹೊರಡಿಸಬೇಕೆಂದು ಹೇಳಿದರೂ ಇದುವರೆಗೂ ಹೊರಡಿಸಿಲ್ಲ. ಆದ್ದರಿಂದ ಈ ಗೊಂದಲಮಯ ಸನ್ನಿವೇಶವನ್ನು ಆದಷ್ಟು ಬೇಗ ನಿವಾರಣೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

†SRI L. G. HAVANUR (Minister for Law, Social Welfare and Backward Classes).–It is a fact that some hardship and inconvenience is being caused to some of the Scheduled Castes and Scheduled Tribes as a result of withdrawal of a circular in which were contained the synonmous names for Scheduled Castes/Tribes, As alleged by the Hon'ble Member Sri G. P. Vadeyarej. it was not the State Government which withdrew the circular of its own accord but the Central Government took objection to the State overnment specifying the synonymous names in contravention of the list of the Scheduled Castes/Tribes as contemplated under Articles 341 and 342. Any caste for that matter does not go by a single name and necessarily I should say almost every caste has more names than one. Since the Presidential notification contained only one name in respect of each caste or tribe, it is the duty of the State Government to give instructions to the concerned officers who are authorised either to issue the certificates or to extend the benefits about the different names by which a particular caste or community goes in different areas It is for that reason in 1976, a Parliamentary Act was brought into force. A committee was constituted for suggesting synonymous names of which I was a member. But unfortunately, the said committee was not allowed to function though I was eager to render my services in the identification of synonymous names. I had to stay here in Bangalore only for the

purpose of rendering such service to the Scheduled Castes/Tribes. I do not know the reasonswhy the committee was not allowed to function though I volunteered that without accepting remuneration I would help the Government in finding out different synonymous names. Behind the back of the existing committee, the then Government issued a circular suggesting synonymous names in respect of very few communities. I do not have any grievance about the correctness of synonymous names that were contained in the earlier circular. Even so, I should say that the procedure adopted by the then Government was highly objectionable so far as I am concerned. It is a fact that when I became the Minister in March, I had to withdraw the circular. To repeat, the circular was withdrawn not of our own accord but under the directions of the Central Government. Having realised the haadship and inconvenience that has been caused to some of the communities and castes, we appointed an expert committee under the Chairmanship of the Commissioner and Secretary to Government, Social Welfare Department, as Chairman, the Director of Social Welfare, Director of Backward Classes and the hon. Member Shri G. P. Vadeyaraj and other legislators as members; The Committee presented an unanimous report to the Government and I accepted the report in its entirety.

The report is being examined and I have given instructions to the Commissioner and other Officers to issue a Government Order in confirmity with the recommendations made by the Committee. Now the so-called injustice that has been caused as a result of non-mentioning of the synonymous names is not because we did not take any measure in the direction but because of certain procedural difficulties that the Government is facing. I assure the hon, Member that we shall do all that is in our power to remove the difficulties and see that benefits are extended to the really deserving communities.

Sir, one of the objections raised is about the competancy of the State Government in specifying these synonymous names. I have sought the opinion of the Law Department and the Law Department said that the State Government had no power to specify the synonymous names for the Scheduled Castes and Scheduled Tribes. I have differed from the opinion of the Law Department and I have said that the State Government does have power to specify the synonymous names, What the State Government or rather what I intend doing is, not to include any, new caste or new tribe and what we actually intend doing is to clarify certain difficulties which are being experienced by the people and the Officers. However. the matter is being examined at the level of the Chief Secretary, the Law Secretary

and the Commissioner for Social Welfare, i. e., the new-comer from first of this month. So far as I am concerned, I still hold that we are competent to specify the synonymous names. There are certain procedural difficulties and I think I am capable of surmounting any difficulties or any objections that may be faced from any quarter.

Regarding the question that is being raised by Sri Basavannappa about the section of the Lingayat community the priestly class obtaining certificates on the ground that a certain caste by name Beda or Budaga Jangama is found in the list of Scheduled Castes, I should like to say that no section of Lingayat barring one or two can be considered to be either a Scheduled Caste or a Scheduled Tribe, much less the Jangamas who are a priestly class among the Lingayats. If certificates are being issued to Beda and Budaga Jangamas that is to members of the priestly class amongst Lingayets on the ground that they are beggars or nomads and if complaints are received by the Government, we shall take necessary steps. Further, we are hearing some gossiping that some of the advanced sections of the Lingayats are taking the benefit of certain names that are found in the Scheduled Castes and Scheduled Tribes and which are similar to some of the sectional names of Lingayats and there appears to be a big racket going on in all the departments of Government where the members of those communities are occupying high offices and who have been authorised to issue certificates. We have not yet received any specific complaint and now that Mr. Basavannappa has brought it to my notice that some sections of Lingayats are misusing their powers and by mis-representation getting the certificates, I shall get it examined. Suffice it for me to say that Beda or Budaga jangam appearing in the list of Seheduled Castes does not belong to the any of the sections of the Lingayat community. I have to explain one more point. The hon. Member has said that the Govarnment has delayed and as a consequence of which, injustice has been done to certain communities. The hon. Member Sri Vadeyaraj was himself a Member of the Expert Committee and he did not express that because of the delay on the part of the Government injustice had been done. He should have mentioned it in his report that the Government was at fault and it is not open to him now to say that because the Government has delayed in the specification of the synonymous names, injustice has been done,

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಜಿ.ಓ. ಇಶ್ಯು ಮಾಡಬೇಕೆಂದು ಆರ್ಡರ್ ಮಾಡಿದುದರ ಬಗ್ಗೆ ಹೇಳಿದರು. ಜಿ.ಓ. ಇಶ್ಯು ಮಾಡಬೇಕೆಂದು ಮಾನ್ಯ ಮಂತ್ರಿಗಳವರೇ ಆರ್ಡರ್ ಮಾಡಿದಾಗಲೂ ಕೂಡ ಇವತ್ತಿನವರೆಗೆ ಜಿ.ಓ. ಹೊರಗೆ ಬಂದಿಲ್ಲ. ಇದಕ್ಕೆ ಯಾರು ಜವಾಬ್ದಾರರು ಎನ್ನತಕ್ಕದ್ದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಆದುದರಿಂದ ಇವತ್ತು ಸಾಯಂಕಾಲವೇ ಜಿ.ಓ. ಇಶ್ಯು ಮಾಡಿಸಲಿ. He stated that it is not open to me to say all those things. I

was a Member of thf Expert Committee. I did participate I did sign and the entire report was unanimous and the Minister was good enough to accept the report and recordingly asked the department to issue the Government Order, Inspite of that, Government Order has not been issued. There must be some Officers who are responsible for all these things; Possibly, those Officers who were relying upon the Govern- of India saying that. That was not the Government of India's nstruction. I don't know whether the Officer in the Government of India has written that letter and if so, on what grounds he had written and all that. I don't know what are the contents of that letter but still on that instant, the Officers are doing injustice to the communities of the Scheduled Castes and Scheduled Tribes. Now the Hon. Minister has openly told us thas he is in full agreement and he is competent to issue, I would like to ask the Government whether the Hon. Minister should see that the Order is issued atleast by this evening because every mintute passed means the continuation of injustice to these people. Consequent upon this confusion, certificates are not being issued. That is why the students are losing their right to apply to Engineering, Medical and other Courses. I therefore sincerely request that, without going into any details as to who is responsible for all these things, let the Government issue a Government Order atleast by this evening. I hope the Government will do that.

SRI L. G. HAVANUR.—We are no less sincere in extending the benefits to the Scheduled Castes and Scheduled Tribes. Since I am a new-comer to politics and a new comer to the administration I feel some hurdles are being placed in my way. However, I told the Hon. House earlier that irrespective of the magnitude of the opposition that may come or the hurdles that might be placed from any quarter, I for one would assure that my opinion that the State Government is competent to issue a Government order mentioning the synonmous names still holds good and I shall maintain that stand-whether my Officers agree with me or not. As regards issuance of the Government Order, this evening itself, I am not assuring this House that it will be possible to do so but I would like to say that it will be issued soon. Even so, I am hopeful of getting the matter cleared in one or two day's time.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಸಭಾಧ್ಯಕ್ಷರೇ, ಈ ಬ್ಯಾಕ್‌ವರ್ಡ್ ಕ್ಲಾಸ್ ನೋಟಿಫಿಕೇಷನ್ ವಿಚಾರದ ಬಗ್ಗೆ ಈ ಮನೆಯಲ್ಲಿ ಪ್ರಸ್ತಾಪ ಮಾಡತಕ್ಕಂಥಾದ್ದು ಬಹಳ ಮಹತ್ವದ ವಿಚಾರವೇ ಆಗಿದೆ. ಅದು ಅಜೆಂಡಾದಲ್ಲಿರದಿದ್ದರೂ ತಾವು ಅಪ್ಪಣೆ ಕೊಟ್ಟಿದ್ದೀರಿ ಅದೇ ರೀತಿಯಾಗಿ ಮಾನ್ಯ ಸದಸ್ಯರು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳವರು ಉತ್ತರ ಕೊಟ್ಟಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಆದರ ವಿಚಾರವಾಗಿಯೂ ಒಂದು ಸ್ಟೇಟ್‌ಮೆಂಟನ್ನು ಮಾಡಿದ್ದರೆ ಒಳ್ಳೆಯದಾಗುತ್ತಿತೆಂಬು ನನಗನ್ನಿಸುತ್ತದೆ. ಆ ರೀತಿಯಾಗಿ ನಿರ್ದಿಷ್ಟವಾದ ಹೇಳಿಕೆಯಾಗಿ ಬಂದಿದ್ದರೆ ಅದರ

ಮೇಲೆ ಸಲಹೆ ಸೂಚನೆಗಳನ್ನು ಕೊಡಬಹುದಾಗಿತ್ತು. ಇದು ಬಹಳ ಮಹತ್ವವಾದ ಪ್ರಶ್ನೆಯಾಗಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು, ಪಾಲಕರು ಸರ್ಟಿಫಿಕೇಟ್‌ಗಳಿಗೋಸ್ಕರ ಪರದಾಡುತ್ತಾ ಒಂದು ದೊಡ್ಡ ತೊಂದರೆಯನ್ನೇ ಎದುರಿಸುತ್ತಿದ್ದಾರೆ. ನಿಜವಾಗಿಯೂ ಪಾಲಕರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಸರ್ಟಿಫಿಕೇಟ್‌ಗೆ ಅವಶ್ಯವಿರುವ ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ನಿಮ್ಮ ತಹಶೀಲ್ದಾರ್‌ರವರ ಕಛೇರಿಗೆ ಹೋಗಿ ಕ್ಯೂನಲ್ಲಿ ನಿಂತರೂ ಸರ್ಟಿಫಿಕೇಟ್‌ಗಳು ಬೇಗ ಸಿಗುತ್ತಿಲ್ಲ. ಎಲ್ಲಾ ವಿವರಗಳು ಇದ್ದರೂ, ಇನ್ನು ಅನೇಕ ವಿವರಣೆಗಳನ್ನು ಕೇಳುತ್ತಾರೆ. ಹಳ್ಳಿಯಿಂದ ಬಂದಂಥ ವಿದ್ಯಾರ್ಥಿಗಳಾಗಲೀ, ಪಾಲಕರು ಆಗಲೀ ಪದೇ ಪದೇ ತೊಡಕಾಡುತ್ತಿದ್ದಾರೆ. ಅಲ್ಲದೇನೇ ಈ ಸರ್ಟಿಫಿಕೇಟ್‌ಗಳನ್ನು ಕೊಡತಕ್ಕಂಥ ಆಫೀಸರ್‌ಗಳು ಬಹುತೇಕವಾಗಿ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ನನಗೆ ಬಂದ ಮಾಹಿತಿ ಪ್ರಕಾರ ಹೇಳುವುದಾದರೆ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ.

2-30 P.M.

ಮಾನ್ಯ ಸಭಾಪತಿಗಳೆ, ಇದು ಅವರ ಅವರ ಆಫೀಸರ್ಸ್‌ಗಳ ಮೇಲೆ ರೇಟು ಹೆಚು ಕಡಿಮೆ ಆಗುತ್ತಿದೆ. ಇದನ್ನು ಯಾವರೀತಿ ತನಿಖೆ ಮಾಡಿಸಬೇಕೋ ಮಾಡಿ. ಬೇಕಾದರೆ ಸಿ.ಐ.ಡಿ. ಡಿಪಾರ್ಟ್‌ಮೆಂಟಿನವರನ್ನು ಕಳುಹಿಸಿಕೊಡಿ. ಪ್ರತಿಯೊಂದು ತಹಸಿಲ್ದಾರ್ ಆಫೀಸುಗಳಲ್ಲಿಯೂ ಇದು ನಡೆಯುತ್ತಿದೆ, ಇದಕ್ಕೆ ಒಂದು ರೇಟನ್ನು ನಿಗದಿ ಮಾಡಿದ್ದಾರೆ ದುಡ್ಡು ಕೊಟ್ಟರೆ ಸರ್ಟಿಫಿಕೇಟ್ ಸಿಕ್ಕುತ್ತದೆ ಇಲ್ಲದೆ ಹೋದರೆ ಸಿಕ್ಕುವುದಿಲ್ಲ. ಇನ್ನು ಎಕಾನಾಮಿಕಲಿ ಬ್ಯಾಕ್‌ವರ್ಡ್ ಏನು ಇದ್ದಾರೆ ಅವರಿಗೂ ಸಿಕ್ಕುತ್ತಾ ಇಲ್ಲ. ಏನು ಸರ್ಕಾರದವರು ಅವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದು ಅವರಿಗೆ ಸಿಕುತ್ತಾ ಇಲ್ಲ. ಅದರ ಲಾಭವನ್ನು ಪಡೆಯಬೇಕಾದರೆ ಅಷ್ಟೇ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅಧಿಕಾರಿಗಳಿಗೆ ಎಷ್ಟು ಹಣ ಕೊಡಬೇಕೋ ಅಷ್ಟೇ ಇವರಿಗೆ ಕೊಡತಕ್ಕಂಥಾದ್ದು, ಸರ್ಕಾರದವರು ದುರ್ಬಲವರ್ಗದವರಿಗೆ ಕೊಡತಕ್ಕ ಅನುಕೂಲದ ಲಾಭವನ್ನು ಅಧಿಕಾರಿಗಳು ತೆಗೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಪ್ರೈಮರಿ ಸ್ಕೂಲುಗಳಲ್ಲಿ ಬ್ಯಾಕ್‌ವರ್ಡ್ಸವರಿಗೆ ೫೦ ರೂಪಾಯಿನಿಂದ ೭೫ ರೂಪಾಯಿವರೆಗೆ ಏನು ಗ್ರ್ಯಾಂಟ್ ಸರ್ಕಾರದವರು ಕೊಡಬೇಕೆಂದು ಮಾಡಿದ್ದಾರೆ ಅದಕ್ಕೆ ಸರ್ಟಿಫಿಕೇಟ್ ಪಡೆಯುವುದಕ್ಕೆ ಖರ್ಚು ಮಾಡಬೇಕಾಗುತ್ತದೆ ಆದ್ದರಿಂದ ಏನು ಪ್ರಯೋಜನ ಅವರಿಗೆ ಸಿಕ್ಕಿದಂತಾಗುತ್ತದೆ. ಒಂದು ಸರ್ಟಿಫಿಕೇಟ್ ಪಡೆಯಬೇಕಾದರೆ ನಾಲ್ಕುಸರಿಯಾದರೂ ಆಫೀಸುಗಳ ಬಾಗಿಲಿಗೆ ಹೋಗಬೇಕಾಗುತ್ತದೆ. ನಾನು ಇದರ ಬಗ್ಗೆ ಸಂಪೂರ್ಣ ಚರ್ಚೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಕೆಲವೊಂದು ಶಬ್ದಗಳ ವರ್ಣನೆ ಏನು ಇದೆ ಅದರಲ್ಲಿ ಕೆಲವನ್ನು ಉದಾಹರಣೆಗೆ ಹೇಳುತ್ತೇನೆ. ಬೇಡ ಜಂಗಮ ಎಂದು ಇದೆ ಅದರ ದುರ್ಲಾಬವನ್ನು ಅನೇಕರು ತೆಗೆದುಕೊಳ್ಳುತ್ತಾರೆ. ನನಗೆ ಇದರಿಂದ ಏನು ಅನುಕೂಲವಿಲ್ಲ ಆದರೆ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸರ್ಕಾರದ ಆಜ್ಞೆಯಲ್ಲಿ ತಪ್ಪು ಇದ್ದರೆ ಅದರಿಂದ ಅನ್ಯಾಯವಾಗುತ್ತದೆ. ನಾನು ಲಿಂಗಾಯತ ಸಮಾಜದಲ್ಲಿ ಇದು ಇದೆಯೆಂದು ಹೇಳುವುದಕ್ಕೆ ಹೇಗುವುದಿಲ್ಲ. ಆದರೆ ಸುದೈವದಿಂದಲೋ ಅಥವಾ ದುರದೈವದಿಂದಲೋ ಈ ಸಮಾಜದಲ್ಲಿ ನಾನು ಹುಟ್ಟಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಲಿಂಗಾಯಿತರಲ್ಲೇ ಅಲ್ಲ ಬೇರೇ ಜನಾಂಗಗಳಲ್ಲಿಯೂ ಇದೆ ಉದಾಹರಣೆಗೆ ಕುರುಬರಲ್ಲಿ ಕಾಡುಕುರುಬ ಎಂದು ಗೊಲ್ಲರಲ್ಲಿ ಕೊಳಲು ಗೊಲ್ಲರೆಂದು ಅನುಕೂಲ ಪಡೆಯುತ್ತಾರೆ. ಇದರಲ್ಲಿ ಸಾಕಷ್ಟು ನ್ಯೂನತೆ ಇದೆ. ಈ ರೀತಿಯ ನ್ಯೂನತೆಯನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಉದಾಹರಣೆಗೆ ಈಗ ಏನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗ ಎಂದು ಯಾವರೀತಿ ಇದೆ ಅದನ್ನು ಯಾವ ಆಧಾರದ ಮೇಲೆ ಹಿಂದೆ ಮಾಡಿದ್ದಾರೆ. ಅದಕ್ಕೆ ಸರಿಯಾದ ಹಾಗೂ ಸ್ಪಷ್ಟವಾದ ಆಧಾರವಿಲ್ಲ. ಉದಾಹರಣೆಗೆ ಹೇಳಬೇಕಾದರೆ ಮಾನ್ಯ ಬಸವಲಿಂಗಪ್ಪನವರು ಅಸ್ಪೃಶ್ಯ ಜನಾಂಗದಿಂದ ಬಂದಿದ್ದಾರೆ ಅದೇ ಶ್ರೀಮಾನ್ ಬಸವಣ್ಣಪ್ಪನವರು ಅಸ್ಪೃಶ್ಯ ಜನಾಂಗದಿಂದ ಬಂದಿಲ್ಲ.

SRI B. BASAVALINGAPPA.—Sir, I think if major premise is wrong, the inference is that even the minor premise will be also wrong, You cannot call me as untouchable. There is no caste of Harijans and the

word is freely used to describe the persons belonging to Scheduled Caste as untouchable my friends made this mistake. We all protest against this kind of using that word. Don't use it so freely. Please call by the name in which they take birth.

ಶ್ರೀ ಜೆ. ಎಚ್. ಪಟೇಲ .—ಮಾನ್ಯ ಬಸವಲಿಂಗಪ್ಪನವರು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅಸ್ಪೃಶ್ಯರೆಂದು ಹೇಳತಕ್ಕಂಥಾದ್ದು ಏನು ಇದೆ ಅದು ಸರಿಯಲ್ಲ. ಆದರೆ ಹಿಂದುಳಿದ ಜನರನ್ನು ವಾಸ್ತವಿಕವಾಗಿ ನೋಡಿದರೆ ಅವರು ವಾಸ್ತವಿಕ ಸ್ಥಿತಿಯಲ್ಲಿ ಹರಿಜನರನ್ನು ಪರಿಶಿಷ್ಟ ಜಾತಿ ಹಾಗೂ ಜನಾಂಗವೆಂದು ಕೇವಲ ಅವರು ಬಡವರಾಗಿದ್ದಕ್ಕೆ ಮಾಡಿದ್ದಾರೆಯೇ ಅಥವಾ ಯಾವ ಆಧಾರದ ಮೇಲೆ ಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬರುವುದಿಲ್ಲ. ಇದಕ್ಕೆ ಯಾವುದಾದರೂ ಇತಿಹಾಸ ಕಾರಣವೇ? ಅಥವಾ ಯಾರೋ ಬುದ್ಧಿವಂತರು ಬರೆದ ಕಾರಣದಿಂದ ಇವರು ಹಿಂದಕ್ಕೆ ಹೋಗಿದ್ದಾರೆಯೋ ಅಥವಾ ಮುಂದಕೆ ಬಂದಿದ್ದಾರೆಯೋ ಗೊತ್ತಿಲ್ಲ. ಆದರೆ ಇದರ ಬಗ್ಗೆ ಬಹಳ ಹೆಚ್ಚು ಹಿಂದುಳಿದ ಜನರಿಗಾಗಿ ಕೆಲಸ ಮಾಡಬೇಕು ಎಂದು ನಾನು ಅವರಿಗೆ ತಿಳಿಸುವುದಕ್ಕೆ ಹೇಳಿದೆ. ಆದರೆ ಕಮಿಟಿಯಲ್ಲಿ ಪ್ರಸ್ತಾಪಕ್ಕೆ ಬಂದಾಗ ಸೆಡ್ಯೂಲ್ಡ್ ಕಾಸ್ಟ್ ಯಾವ ಆಧಾರದ ಮೇಲೆ ಇದು ಹುಟ್ಟಿಕೊಂಡು ಬಂತೋ ಗೊತ್ತಿಲ್ಲ, ಹಿಂದೆ ಪೆರುಮಾಳ್ ಕಮಿಟಿ ಬಂದಮೇಲೆ ಆಗಿನ ಸಮಾಜ ಕೆಲವೊಂದು ಅನಿಷ್ಟವನ್ನು ಅನುಭವಿಸುತ್ತಾ ಬಂದಿದೆ. ಆದ್ದರಿಂದ ಮಾನ್ಯ ಬಸವಲಿಂಗಪ್ಪನವರು ಅಸ್ಪೃಶ್ಯರು ಎಂದು ಹೇಳುವ ಪ್ರಶ್ನೆಯಿಲ್ಲ. ನಾನು ಕಂಡಹಾಗೆ ನಮ್ಮ ಬಸವಣ್ಣಪ್ಪನವು ಅಸ್ಪ ಶ್ಯರೆಂದು ಹೇಳುವುದು ಮುಖ್ಯವಲ್ಲ ಅವರು ಕೂಡ ಹಿಂದೆ ಇದ್ದಾರೆ. ಇದಕ್ಕೋಸ್ಕರ ಎಂಟುನೂರು ಒಂಬೈನೂರು ವರ್ಷಗಳ ಇತಿಹಾಸ ಇದೆ. ಎಲ್ಲರನ್ನೂ ನೋಡುವಾಗ ಸಮಾಜದಲ್ಲಿ ಮುಂದುವರಿದ ಜನಾಂಗ ಅಥವಾ ಹಿಂದುಳಿದ ಜನಾಂಗ ಎನ್ನುವ ತಾರತಮ್ಯ ಮಾಡುವುದಕ್ಕಿಂಥ ಯಾವುದಾದರೂ ಒಂದು ಆಧಾರದಮೇಲೆ, ಒಂದು ಪ್ರಿನ್ಸಿಪಲ್ ಮೇಲೆ ಇದನ್ನು ಗೊತ್ತುಮಾಡಬೇಕು. ಆದರೆ ಅದು ನಮ್ಮ ಅಸೆಂಬ್ಲಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲ ಜೊತೆಗೆ ಅದಕ್ಕೆ ಸ್ಕೋಪ್ ಕೂಡ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಹೇಳುವುದು ಏನು ಎಂದರೆ ಈ ಅನಿಷ್ಟಕಾರಕ ಪ್ರವೃತ್ತಿ ಒಂದು ಕಂಡಿಯಲ್ಲಿ ನುಸುಳಿಕೊಳ್ಳುವ ಸ್ವಭಾವ ಇದೆ, ಇದನ್ನು ತಾವು ಕೊನೆಗಾಣಿಸಬೇಕಾಗುತ್ತದೆ. ಯಾರೇ ದುರುಪಯೋಗಮಾಡಿಕೊಂಡರೆ, ಉದಾಹರಣೆ ಲಿಂಗಾಯಿತರೇ ದುರುಪಯೋಗ ಮಾಡಿಕೊಂಡರೆ ಅದಕ್ಕೆ ಕಾರಣ ಇರುತ್ತದೆ. ತಾವು ಒಂದು ಮಾತು ಹೇಳಿದಿರಿ ಇದಕ್ಕೆ ನನ್ನ ಅಧಿಕಾರಿಗಳು ಅಡ್ಡಿಬರುತ್ತಾರೆ ಜೊತೆಗೆ ನಾನು ಹೊಸಬರೆಂದು. ಆದರೆ ಈ ವ್ಯವಸ್ಥೆಯಲ್ಲಿ ಇದು ಒಂದುಸಾರಿ ತಮಗೆ ಗೊತ್ತಾಗುತ್ತದೆ, ನಿಮಗೆ ಗೊತ್ತಾದಾಗ ಅದರ ಮಹತ್ವ ತಿಳಿಯುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ನಾನು ಇವತ್ತು ಹೇಳುತ್ತಾ ಇದ್ದೇನೆ ತಾವು ಕಾನೂನು ಏನು ಮಾಡುತ್ತೀರಿ ಆ ಆಜ್ಞೆಯಲ್ಲಿ ಒಂದು ರೀತಿಯಿಂದ ಹೇಳುವಾಗ ಅರ್ಥಕ್ಕೆ ಹೋಗಿ ಅನರ್ಥಕ್ಕೆ ಶಬ್ಧಗಳ ಉಪಯೋಗದಿಂದ ಕೆಲವು ಜನರು ಇದರ ದುರ್ಲಾಭ ಪಡೆಯುವುದಕ್ಕೆ ಅನುಕೂಲ ವಾಗುತ್ತದೆ. ಇದು ಎಲ್ಲಾ ಜನಾಂಗಗಳಲ್ಲಿಯೂ ಈ ಪ್ರವತ್ತಿ ಇದೆ. ಈಗಾಗಲೇ ಇದನ್ನು ವಿವರವಾಗಿ ಹೇಳುವ ಅವಶ್ಯಕತೆ ಇದೆ. ಆದ್ದರಿಂದ ಇದಕ್ಕೆ ಒಂದು ತಿದ್ದುಪಡಿ ಮಾಡುವುದು ಸೂಕ್ತ ಎಂದು ಹೇಳು ತ್ತೇನೆ ಇದಕ್ಕೆ ಸರ್ಕಾರದವರು ಕೂಡಲೇ ಇದಕ್ಕೆ ತಿದ್ದುಪಡಿ ತಂದು ಇದನ್ನು ಪರಿಹರಿಸಬೇಕೆಂದು ಹೇಳುತ್ತೇನೆ. ಅನೇಕ ವಿಚಾರಗಳು ಈಗಾಗಲೇ ಪ್ರಸ್ತಾಪವಾಗಿವೆ. ಈಗ ಲೇಟೆಸ್ಟ್ ಏನು ಆಜ್ಞೆಯನ್ನು ಹೊರಡಿಸಿದ್ದಾರೆ ಅದರ ಲಾಭ ಕೆಲವು ಜನರಿಗೆ ಸಿಕ್ಕುತ್ತಾ ಇಲ್ಲ. ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಈ ಪ್ರಗತಿಪರವಾದ ರಾಜ್ಯದಲ್ಲಿರತಕ್ಕಂಥ ಬಡಜನಾಂಗಕ್ಕೆ, ಹಿಂದುಳಿದವರಿಗೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನೇಕ ವಿಧವಾದ ಸೌಕರ್ಯಗಳನ್ನು ಕೊಡುತ್ತಿರುವುದರ ಬಗ್ಗೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ, ಅದರಲ್ಲಿ ಏನೂ ಸಂಶಯು ಇಲ್ಲ. ಆದರೆ ಈ ಲಾಭ ಅವರಿಗೆ ಎಲ್ಲಾ ವಿಧದಲ್ಲಿ ಸಿಕ್ಕುತ್ತಾ ಇಲ್ಲ. ಈ ಬಗ್ಗೆ ಅಧಿಕಾರಿಗಳ ಪ್ರವೃತ್ತಿ ಏನಿದೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ ಅಧಿಕಾರಿಗಳು ಇದ್ದರೂ ಅಥವಾ ಮುಂದುವರಿದ ಜನಾಂಗಕ್ಕೆ ಸೇರಿದ ಅಧಿಕಾರಿಗಳು ಇದ್ದರೂ ಅವರು ಈ ಜನಾಂಗಕ್ಕೆ ಸರ್ಟಿಫಿಕೇಟ್ ಕೊಡುವುದಿಲ್ಲ. ಕಾಂಚಾಣವನ್ನು ಅರ್ಪಿಸಿದಾಗ ಮಾತ್ರ ಅವರಿಗೆ ಸರ್ಟಿಫಿಕೇಟ್ ಸಿಕ್ಕುತ್ತದೆ. ಇದರಲ್ಲಿ ಜಾತಿಬೇದವೇನೂ ಇರುವುದಿಲ್ಲ. ತಹಶೀಲ್ದಾರ್ (ಫೀಸಿನಲ್ಲಿ ನಡೆಯುತ್ತಾ ಇದೆ. ಇದನ್ನು ತಪ್ಪಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು, ಮಾನ್ಯ ಹಾವನೂರ್ ವರದಿಯ ಬಗ್ಗೆ ಈ ಮನೆಯಲ್ಲಿ ಚರ್ಚೆಯಾಗಿಲ್ಲ. ಅದರ ಬಗ್ಗೆ ಇಲ್ಲಿ ಚರ್ಚೆಯಾಗ

ಬೇಕೆಂದು ನಮ್ಮ ಅಭಿಪ್ರಾಯವಿದೆ. ಹಾವನೂರ್ ವರದಿಯಲ್ಲಿ ಪ್ರಗತಿಪರವಾದ ವಿಚಾರಗಳು ಇದೆಯೋ ಅಥವಾ ನಮ್ಮ ಅಭಿಪ್ರಾಯಗಳು ಬೇರೆ ಇದೆಯೋ, ಅದನ್ನು ಹೆಚ್ಚು ಪ್ರಗತಿಪರವಾಗಿ ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನತಕ್ಕಂಥಾದನ್ನು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತಿನದಿವಸ ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಸಿಕ್ಕತಕ್ಕಂಥ ಸೌಕರ್ಯಗಳು ಸಿಕ್ಕಿಲ್ಲ. ಇದರಲ್ಲಿ ರಾಜಕೀಯ ಬಂದಿದೆ. ಮಾನ್ಯ ಹಾವನೂರ್ ವರದಿಯಲ್ಲಿ ಕೊಟ್ಟಿರುವುದೇ ಬೇರೆ, ಆಜ್ಞೆಯಲ್ಲಿ ಹೊರಡಿಸಿರುವುದೇ ಬೇರೆಯಾಗಿದೆ. ಇದರ ಬಗ್ಗೆ ಹೇಳುವುವಕ್ಕೆ ನನಗೆ ಈಗ ಸಮಯವಿಲ್ಲ ಅದು ಇಲ್ಲಿ ಚರ್ಚೆಗೆ ಬಂದಾಗ ನಾನು ಹೇಳುತ್ತೇನೆ, ಆದ್ದರಿಂದ ಈಗ ಬರತಕ್ಕಂಥ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಯಾಪರೀತಿ ಪ್ರಯತ್ನ ಮಾಡುತ್ತಾರೆ ಎಂದು ಕೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಯವರು ಈ ವಿಚಾರದಲ್ಲಿ ಒಂದೆರಡು ದಿವಸದಲ್ಲೇ ಜಿ.ಓ ಪ್ರಕಟ ಮಾಡುವುದಾಗಿ ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಸಿನಾನಿಮಸ್ ಟರ್ಮ್ಸ್ ಬಗ್ಗೆ ಅಧಿಕಾರಿಗಳಲ್ಲಿ ಮತಬೇದ ಇದ್ದರೂ ಅದು ಸರ್ಕಾರದ ದೃಷ್ಟಿಯಲ್ಲಿ ಸರಿ ಇದೆ, ನನ್ನ ದೃಷ್ಟಿಯಲ್ಲೂ ಅದು ಸರಿ ಇದೆ ಎಂದು ಅವರು ಹೇಳಿದರು. ಆ ವಿಷಯವಾಗಿ ನಾನು ಒಂದು ಮಾತನ್ನು ಮಾನ್ಯ ಕಲ್ಯಾಣ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಕಾರಣವೇನೆಂದರೆ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್‌ಕ್ಲಾಸ್ ಲಿಸ್ಟ್ ವಿಷಯವಾಗಿ ಗೌರ್ನಮೆಂಟ್‌ನವರು ಏನು ಒಂದು ಜಿ.ಓ. ಮಾಡಿದ್ದಾರೆ ಅದರಲ್ಲಿ ಅನೇಕ ಸಿನಾನಿಮಸ್ ಟರ್ಮ್ಸ್ (ಸಮಾನಾರ್ಥ) ಸರಿಯಾಗಿ ಇಲ್ಲ. ವಿಜಾಪುರ ಜಿಲ್ಲೆ ಅಥವಾ ಉತ್ತರ ಕರ್ನಾಟಕದಲ್ಲಿ ಕೋಳಿ ಟೋಕರಿ ಮತ್ತು ಡೋರಕೊಳಿ ಜನಾಂಗ ಇಲ್ಲ ಬಾಂಬೆ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಟೋಕರಿ ಮತ್ತು ಡೋರಕೋಳಿ ಜನಾಂಗ ಇದೆ. ಈ ಉತ್ತರ ಕರ್ನಾಟಕದಲ್ಲಿ ಕೆಲವರು ಟೋಕರಿ ಕೋಳಿ ಜಾತಿ ಅಥವಾ ಡೋರಕೋಳಿ ಎಂದು ಹೇಳಿ ಸರ್ಟಿಫಿಕೇಟ್ ತೆಗೆದುಕೊಂಡು ಲಾಭ ಪಡೆಯುತ್ತಿದ್ದಾರೆ. ಭಜಂತ್ರಿ ಮತ್ತು ಕೊರರಿರ್ ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಇಲ್ಲದಿದ್ದರೂ ಕೂಡ ಈ ಸಿನಾನಿಮಸ್ ಹಳೆ ಮೈಸೂರದ ಕೊರಮ ಎಂಬ ಜಾತಿಗೆ ಸಮಾನಾರ್ಥ ಹೊಂದಿಕೆಯಾಗುವಂತೆ ಮಾಡಿಕೊಂಡು ಹರಿಜನರಿಗೆ ದೊರೆಯು ತಕ್ಕಂಥ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇದರಿಂದ ಹರಿಜನರಿಗೆ ಅನ್ಯಾಯವಾಗುತ್ತಿದೆ. ಹರಿಜನರಿಗೆ ಇರತಕ್ಕಂಥ ಸವಲತ್ತುಗಳು ನಾನ್ ಷೆಡ್ಯೂಲ್ಡ್ ಕ್ಯಾಸ್ಟ್ (Non.Scheduled caste) ಜನರು ಪಡೆಯುತ್ತಿರುವುದನ್ನು ತಪ್ಪಿಸಬೇಕು ಮತ್ತು ಆ ಜನಕ್ಕೆ ಬೇಕಾದ ಸವಲತ್ತುಗಳನ್ನು ಬೇರೆಯಾಗಿ ಕೊಡಿ ನಾನು ಬೇಡ ಅನ್ನಲಾರೆ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಜಿ.ಓ ನಲ್ಲಿ ಈ ಸಿನಾನಿಮಸ್ ಟರ್ಮ್‌ಗಳನ್ನು ಹೊಂದಿಕೆ ಮಾಡುವಾಗ ನಿಜವಾದ ದೀನದಲಿತರು, ಮತ್ತು ಅಸ್ಪೃಶ್ಯರು ಯಾರಿದ್ದಾರೆ ಅವರಿಗೆ ಅನ್ಯಾಯವಾಗದಂತೆ ಅವರ ಸವಲತ್ತುಗಳು ಬೇರೆ ಜನಾಂಗಕ್ಕೆ ಹೋಗದಂತೆ ನೋಡಿಕೊಂಡು ಜಿ.ಓ. ಹೊರಡಿಸಬೇಕು. ಎರಡನೆಯದಾಗಿ ಜಿ.ಓ, ಇಷ್ಯೂ ಮಾಡುವಾಗ ಜಿ.ಓ.ನಲ್ಲಿ ರಾಜ್ಯಾಂಗಕ್ಕೆ ವಿರುದ್ಧವಾಗದಂತೆ ಮತ್ತು ವಿರುದ್ದ ಇಲ್ಲವೇ ಎಂಬುದನ್ನು ಸಹ ಪರಿಶೀಲಿಸಿ ಸರಕಾರಿ ಆದೇಶ ಹೊರಡಿಸಬೇಕು. ಮತ್ತು ಮೂರನೆಯದಾಗಿ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಟ್ ಟ್ರೈಬ್ಸ್‌ಗೆ ಸಂಬಂಧಪಟ್ಟಂತೆ ಒಂದು ಕಾಂಪ್ರಹೆನ್ಸಿವ್ ಬಿಲ್ ಪಾರ್ಲಿಮೆಂಡರಿ ಕಮಿಟಿ ಮುಂದೆ ಇರುವುದರಿಂದ. ಅದನ್ನು ಪುನರ್‌ಪರಿಶೀಲನೆ ಮಾಡುವಂಥ ಸಂದರ್ಭ ಇರುವುದರಿಂದ ಅದಕ್ಕಾಗಿ ಮಾನ್ಯ ಸಚಿವರು ಇದನ್ನು ಕೆಲವು ಕಾಲದವರೆಗೆ ತಡೆಯುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಕೊನೆಯದಾಗಿ ಈ ನಿಜವಾದ ಹರಿಜನರಿಗೆ ಮತ್ತು ಗಿರಿಜನರಿಗೆ ಯಾವರೀತಿಯಲ್ಲೂ ಅನ್ಯಾಯವಾಗದಂತೆ ಜಿ.ಓ. ಹೊರಡಿಸಬೇಕು ಎಂದು ನಾನು ಮತ್ತೊಮ್ಮೆ ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಉಮಾಕಾಂತ ಬೋರ್‌ಕರ್ (ಸಿರ್ಸಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹೋದ್ಯೋಗಿಗಳಾದ ಅರಿಕೇರಿಯವರ ವಿಚಾರವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಆದರೆ ನಮ್ಮ ಸಹೋದ್ಯೋಗಿಗಳಾದ ಮಾನ್ಯ ಜೆ. ಹೆಚ್. ಪಟೇಲ ರವರು ಮಾತನಾಡುವಾಗ ಮಾನ್ಯ ಬಸವಲಿಂಗಪ್ಪನವರು ಒಂದು ವಿಚಾರವನ್ನು ವ್ಯಕ್ತಪಡಿಸಿದರು. ಆ ಬಗ್ಗೆ ನಾನು ಅದು ಸತ್ಯಕ್ಕೆ ದೂರವಾದ ವಿಚಾರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಏನು ಹೇಳುದರು ಎಂದರೆ there is no untouchability Class ಮತ್ತು there is no Harijan Class ಎನ್ನತಕ್ಕಂಥ ಮಾತನು ಹೇಳಿದರು. ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್, ಪರಿಶಿಷ್ಟ ಜಾತಿ ಎಂದು ಹೇಳಿವಂಥ ಒಂದು ಕ್ಲಾಸ್

ಮಾಡಿದ್ದಾರೆ. ಈ ಕ್ಲಾಸ್ಸಿಗೆ ಹರಿಜನರು ಎಂದು ಹೇಳುವಂಥ ಪರ್ಯಾಯ ಶಬ್ದವನ್ನು ಕೊಡಲಾಗಿದೆ. ಇದು ಪ್ರಾಕ್ಟೀಸ್‌ನಲ್ಲಿ ಇರುವಂಥ ವಿಚಾರ. ಇದನ್ನು ಬೇರೆ ಕಾಯಿದೆ ಕಕ್ಷಿಯಲ್ಲಿ ಈ ಶಬ್ದವನ್ನು ಉಪಯೋಗಿಸಿರಲಿಕ್ಕಿಲ್ಲ. ಇವತ್ತು ಹರಿಜನ ಎನ್ನತಕ್ಕಂಥ ಶಬ್ದ, ಇದು ಸಂಪೂರ್ಣವಾಗಿ ವಿಸ್ತಾರವಾಗಿ ಉಪಯೋಗಿಸಲ್ಪಡುತ್ತಾ ಇದೆ. ಇದರ ಜೊತೆಯಲ್ಲಿ ಅವರು ಅಸ್ಪೃಶ್ಯಕ್ಲಾಸ್ ಎಂದು ಹೇಳಿದರು. ಇವತ್ತು ನಾನೂ ಸಹ ಅಸ್ಪೃಶ್ಯ ಸಮಾಜದಿಂದ ಬರುತ್ತಿದ್ದೇನೆ. ಇದಕ್ಕಾಗಿ ಅಸ್ಪೃಶ್ಯ ಕ್ಲಾಸ್ ಇದೆಯೆಂದು ಹೇಳುವುದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ನಾನು ಕಳೆದ ವರ್ಷದ ಕುಮಟ ತಾಲ್ಲೂಕಿನ ಒಂದು ಹಳ್ಳಿಗೆ ಹೋಗಿದ್ದೆ. ಆ ಹಳ್ಳಿಯಲ್ಲಿ ಈಶ್ವರ ದೇವಸ್ಥಾನಕ್ಕೆ ದೇವರಿಗೆ ಹಣ್ಣುಕಾಯಿ ಮಾಡಿಸುವುದಕ್ಕೆ ಹೋಗಿದ್ದಾಗ ಆ ಹಳ್ಳಿಯ ಎಲ್ಲಾ ಬ್ರಾಹ್ಮಣ ಜನಾಂಗದವರು ಲಾಟಿ ತೆಗೆದುಕೊಂಡು ಬಂದು ನಮಗೆ ಹೊಡೆಯುವುದಕ್ಕೆ ಬಂದರು. ಅವರು ಹೇಳುತ್ತಾರೆ ಮೇಲಿನ ನೀರು ಮೇಲೆ ಹರಿಯಬೇಕು ಕೆಳಗಿನ ನೀರು ಕೆಳಗೇ ಹರಿಯಬೇಕು ಎಂದು. ಈ ಒಂದು ಮುಂದುವರಿದ ಜನಾಂಗದ ದೃಷ್ಟಿಯಲ್ಲಿ ನಾವು ಅಸ್ಪೃಶ್ಯರು ಇದ್ದೇವೆ. ನಾವು ಅವರಿಗೆ ಕೆಳಗಿನ ನೀರು, ಕೊಳಚೆ ನೀರು ಆಗಿದ್ದೇವೆ. ಅಲ್ಲಿ ಇವತ್ತಿಗೂ ಇದು ಪ್ರಾಕ್ಟೀಸ್‌ನಲ್ಲಿ ಇದೆ. ಇದು ಅಲ್ಲದೇ ತಿಪಟೂರು ಟೌನ್‌ನಲ್ಲಿ ಇರತಕ್ಕಂಥ ತಿಪಟೂರು ಅಮ್ಮನ ದೇವಸ್ಥಾನದಲ್ಲಿ ಈ ಷೆಡ್ಯೂಲ್ಡ್ ಕ್ಯಾಸ್ಟ್ ಕೆಳಗೆ ಬರತಕ್ಕಂಥ ಕೆಲವು ಜಾತಿಗಳಿಗೆ ಇವತ್ತಿಗೂ ಪ್ರವೇಶ ಇಲ್ಲವಾಗಿದೆ. ಈ ಜನರು ದೇವಸ್ಥಾನಕ್ಕೆ ಹಣ್ಣುಕಾಯಿ ಮಾಡಿಸುವುದಕ್ಕೆ ಹೋದರೆ ದೇವಸ್ಥಾನದ ಹೊರಗೆ ನಿಂತು ಒಳಗಡೆ ಇರುವವರ ಕೈಯಲ್ಲಿ ಪೂಜಾರಿಗೆ ಹಣ್ಣು ಕಾಯಿಗಳನ್ನು ಕಳಿಸಬೇಕಾಗಿದೆ. ಅವರು ಪೂಜೆ ಮಾಡಿಸಿಕೊಂಡು ಬಂದು ಈ ಜನಕ್ಕೆ ಹಣ್ಣುಕಾಯಿಗಳನ್ನು ತಲುಪಿಸಬೇಕಾಗಿದೆ. ಇವತ್ತಿಗೂ ತಿಪಟೂರು ಟೌನಿನಲ್ಲಿ ಇದು ನಡೆಯುತ್ತಿದೆ. ಈ ಬಗ್ಗೆ ನಾವು ಅಸ್ಪೃಶ್ಯರೇ ಅಥವಾ ಸ್ಪೃಶ್ಯರೇ ಎಂಬುದನ್ನು ತಾವು ವಿಚಾರ ಮಾಡಬೇಕು. ಮಾನ್ಯ ಮಂತ್ರಿಯವರು ಈ ರೀತಿ ತಪ್ಪು ಹೇಳಿಕೆ ಕೊಟ್ಟು ಈ ಸದನದ ದಿಕ್ಕನ್ನು ಬೇರೆಡೆಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನು ನಾನು ಅತ್ಯಂತ ದುಃಖದಿಂದ ಹೇಳುತ್ತಿದ್ದೇನೆ. ಈ ಬಗ್ಗೆ ಒಂದು ಸರಿಯಾದ ವ್ಯವಸ್ಥೆಯಾಗಬೇಕು. ಮಾನ್ಯ ಜೆ. ಹೆಚ್. ಪಟೇಲರು ಹೇಳಿದಹಾಗೆ ಹರಿಜನರನ್ನು ಸ್ಪೃಶ್ಯ ಜನರಿಂದ ಬೇರ್ಪಡಿಸಿ ಅವರಿಗೆ ಹೆಚ್ಚು ಸವಲತ್ತುಗಳು ಸಿಕ್ಕುವ ಹಾಗೆ ಅವಕಾಶ ಮಾಡಿಕೊಡಬೇಕು ಈ ಹರಿಜನರು. ಪರಿಶಿಷ್ಟ ಜಾತಿಯ ಲಿಸ್ಟ್‌ನಲ್ಲಿ ಸ್ಪೃಶ್ಯರು ಯಾರಿದ್ದಾರೆ ಅವರನ್ನು ಅದರಿಂದ ಬೇರ್ಪಡಿಸಿ ಅವರನ್ನು ಬ್ಯಾಕ್‌ವರ್ಡ್ ಕಮ್ಯುನಿಟಿಯಲ್ಲಿ ಹಾಕಬೇಕು. ಸರ್ಕಾರದವರು ಈ ಬ್ಯಾಕ್‌ವರ್ಡ್ ಕ್ಲಾಸ್‌ಗೆ ೨೦ ಪ್ರತಿಶತ ಸವಲತ್ತುಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಈ ೨೦ ಪ್ರತಿಶತದಲ್ಲಿ ಬೇಕಾದಷ್ಟು ಸವಲತ್ತುಗಳನ್ನು ಅವರು ಪಡೆಯುವುದಕ್ಕೆ ಅವಕಾಶ ಇರುವಾಗ ನಮಗೆ ಕೊಟ್ಟಿರತಕ್ಕಂಥ ಸವಲತ್ತುಗಳಿಗೆ ಅಡ್ಡಬಂದು ಯಾವ ಪರಿಸ್ಥಿತಿಯನ್ನು ತಂದಿದ್ದಾರೆ ಎಂದರೆ ನಮಗೆ ಯಾವ ಸವಲತ್ತೂ ಸಿಕ್ಕದಹಾಗೆ ಮಾಡಿದ್ದಾರೆ. ನಾವು ಯಾರಾದರೂ ಆಫೀಸರ್ ಹತ್ತಿರ ಹೋದರೆ ಅವರು ಏನು ಹೇಳುತ್ತಾರೆ ಎಂದರೆ "೩೦ ವರ್ಷಗಳಿಂದ ಅಸ್ಪೃಶ್ಯರು ಸಾಕಷ್ಟು ಸಹಾಯವನ್ನು ತೆಗೆದುಕೊಂಡಿದ್ದಾರೆ, ನಾವು ಹೊಸ ಅಸ್ಪೃಶ್ಯರಿಗೆ ಅವಕಾಶ ಮಾಡಿಕೊಡ ತ್ತೇವೆ" ಎಂದು ಹೇಳುತ್ತಾರೆ. ಇದನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರದವರು ಒಂದು ಕಾನೂನನ್ನು ಜಾರಿಗೆ ತರಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಹೊಸ ಮಾನ್ಯ ಸದಸ್ಯರು ಬಹಳ ಚನ್ನಾಗಿ ಮಾತನಾಡಿದ್ದಾರೆ. ಅವರು ತಿಳಿದು ಮಾತನಾಡಿದ್ದಾರೆಯೋ ಅಥವಾ ತಿಳಿಯದೇ ಮಾತನಾಡಿದ್ದಾರೆಯೋ ನನಗೆ ಅರ್ಥವಾಗಿಲ್ಲ. ಅವರು ಒಂದು ವೇಳೆ ತಿಳಿಯದೇ ಮಾತನಾಡಿದ್ದರೆ ಪರವಾಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಅವರು ಅನುಭವಸಿ ಮಾತನಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಅನುಭವಿಸಿ ಮಾತನಾಡಲಿ.

SRI M. V. RAJASHEKARAN.—I would like to know under what rule this subject is being discussed now. Secondly, this issue is coming up before the House time and again. we would request you to allot some time to it so that a full debate can take place in this House. You have not so far agreed to give permission for that.

The third point is, would the Minister or the Government tell me whether the Minister belongs to backward class or forward class. This is my last clarification which I would like to have.

SRI B. BASAVALINGAPPA.—It is a good point of order. Before the point of order is accepted by the Hon'ble Speaker I think he will accept that there are a lot of changes and something is being discussed.

MR. SPEAKER.—The Hon'ble Member has raised the point of order The Hon'ble Minister is given an opportunity to say something in the matter. After hearing him I will give my ruling.

ಶ್ರೀ ಬಿ. ಬಸವಲಿಂಗಪ್ಪ.–ನಾನು ಆಗಲೇ ಹೇಳುತ್ತಿದ್ದ ಹಾಗೆ ಮಾನ್ಯ ಸದಸ್ಯ ಶ್ರೀ ಉಮಾಕಾಂತ ಬೋರ್ಕರ್ ಅವರು ಯಾವ ಉದ್ದೇಶದಿಂದ ಹಾಗೆ ಹೇಳಿದರೋ ನನಗೆ ಅರ್ಥವಾಗಲಿಲ್ಲ. ಹರಿಜನರು ಯಾರು, ಅಸ್ಪೃಶ್ಯರು ಯಾರು ಪರಿಶಿಷ್ಟ ವರ್ಗದವರಾರು ಎನ್ನುವುದರ ಬಗ್ಗೆ ಮಾತನಾಡುವುದಕ್ಕೆ ಅವರಿಗೆಷ್ಟು ಹಕ್ಕಿದೆಯೋ ನನಗೂ ಅಷ್ಟೇ ಹಕ್ಕಿದೆ. ಆದರೆ, ಅವರು ವಿಷಯವನ್ನು ಆಳವಾಗಿ ಅಭ್ಯಾಸ ಮಾಡಿ ವಾಸ್ತವಾಂಶವನ್ನು ತಿಳಿದುಕೊಂಡು ಮಾತನಾಡಿದ್ದರೆ, ನಾನು ಸಂತೋಷಪಡುತ್ತಿದ್ದೆ. ಜನರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಇಷ್ಟು ಹಗುರವಾಗಿ ತೆಗೆದುಕೊಂಡು ಯಾರೋ ಹೇಳಿದರು ಬಸವಲಿಂಗಪ್ಪ ನವರು ಹೇಳಿದರು ಅಂತ ಹೇಳುವುದು ಸರಿಯಲ್ಲ. ಹಾಗೆ ಹೇಳುವುದನ್ನು ಇನ್ನು ಮೇಲೆ ಮಾನ್ಯ ಸದಸ್ಯರು ಕಡಿಮೆ ಮಾಡಿದರೆ, ನಾನು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

MR. SPEAKER.—The hon'ble member Sri G, P. Vadeyaraj has raised the matter and I have given him an opportunity and extended it to one or two members.

ಶ್ರೀ ಜಿ. ಎಸ್. ಶಿವನಂಜಪ್ಪ.—ಇಂದು ಸಾವಿರಾರು ಜನ ವಿದ್ಯಾರ್ಥಿಗಳು ಪರಿತಪಿಸುತ್ತಿದ್ದಾರೆ. ತಾಲ್ಲೂಕು ಕಛೇರಿ ಮುಂದೆ ಸಾವಿರಾರು ಜನ ವಿದ್ಯಾರ್ಥಿಗಳು ಬಹಳ ತೊಂದರೆಪಡುತ್ತಿದ್ದಾರೆ. ನಾವು ಆಜ್ಞೆ ಹೊರಡಿಸಿಬಿಟ್ಟಿದ್ದೇವೆ ಎಂದು ಸರ್ಕಾರದವರು ಹೇಳಿಬಿಟ್ಟರಾಯಿತೆ ? ಅದನ್ನು ಸರಿಯಾಗಿ ಕಾರ್ಯಗತ ಮಾಡುವುದು ಬೇಡವೆ ? ಬಿ.ಎ. ಮತ್ತು ಬಿ.ಎಸ್ಸಿ., ಶಿಕ್ಷಣಕ್ಕೆ ಸೀಟುಗಳಿಗಾಗಿ ಹಾವನೂರು ವರದಿ ಪ್ರಕಾರ ಬಹಳಷ್ಟು ವಿದ್ಯಾರ್ಥಿಗಳು ಇಂದು ಅಪ್ಲೈ ಮಾಡುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ಒಂದು ನಿರ್ದಿಷ್ಟವಾದ ಸರ್ಕಾರಿ ಆದೇಶವನ್ನು ಕೂಡಲೇ ಹೊರಡಿಸಬೇಕೆಂದು ಪ್ರಾರ್ಥನೆ.

MR. SPEAKER,—The Hon'ble Member Sri Rajasekharan has raised a point of order and I will give ruling. Sri Vadeyaraj has given notice requesting me to permit him to raise certain matter The matter pertains to Scheduled Castes and Schedule Tribes regarding issue of caste certificates. So, under rule 312 I have permitted the hon'ble member. It is perfectly in order.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ. ತಾವೇ ತೀರ್ಮಾನ ಮಾಡಿರುವ ಇಂದಿನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈಗ ಸದನದಲ್ಲಿ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಸೂಚಿಸಿಲ್ಲ. ಅಲ್ಲದೆ, ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಹಲವಾರು ವಿಷಯಗಳು ಇನ್ನೂ ಸದನದಲ್ಲಿ ಪ್ರಸ್ತಾಪಕ್ಕೆ ಬಂದಿಲ್ಲ. You can defintely permit the hon'ble member after other items on the agenda are over. Those matters in the Agenda have not been taken up.

SRI M. V. RAJASEKHARAN.—I am not against taking it up. What I requested is if you are permitting discussion, let there be full discussion so that everyone can participate.

ಅಧ್ಯಕ್ಷರು.—ನಿಯಮದ ಪ್ರಕಾರ ಅಷ್ಟೊಂದು ವ್ಯಾಪ್ತಿ ಈ ವಿಚಾರಕ್ಕಿಲ್ಲ.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಅಧ್ಯಕ್ಷರೇ, ಈ ಸದನಲ್ಲಿ ಯಾರು ಯಾರು ನಿಯಮವನ್ನನುಸರಿಸದೆ ಮಾತನಾಡುತ್ತಾರೆ. ಅವರು ಇಲ್ಲಿ ಮಾತನಾಡವುದಕ್ಕೆ ಅವಕಾಶವಿದೆ. ನಿಜವಾಗಿಯೂ ಯಾರು ಮಾತನಾಡಬೇಕೆಂದು ಅಪೇಕ್ಷೆಪಡುತ್ತಾರೆ, ಅವರಿಗೆ ಅವಕಾಶವಿಲ್ಲ. ಈ ಸದನದಲ್ಲಿ ನಿಯಮವಿಲ್ಲ ಏನು ಇಲ್ಲ. ಮಾನ್ಯ ಒಡೆಯರಾಜ್ ಅವರು ತಂದಿರುವ ವಿಷಯ ಸರಿಯಾಗಿ ಐದು ನಿಮಿಷದೊಳಗೆ ಮುಗಿಯಬಹುದಿತ್ತು. ಆದರೆ, ಸದಸ್ಯರು ಬೇರೆ ದಾರಿ ಹಿಡಿದು. ಇನ್ನೂ ಮುಗಿಯದ ಹಾಗೆ ಮಾಡಿದ್ದಾರೆ. ಕೆಲವರು ಹಾವನೂರು ವರದಿ ಬಗ್ಗೆ ಚರ್ಚೆಯಾಗಲಿ ಎಂದರೆ, ಇನ್ನೊಬ್ಬರು ಪರಿಶಿಷ್ಟ ವರ್ಗದವರಿಗೆ ಕೊಡುವ ಸರ್ಟಿಫಿಕೇಟ್ ಬಗ್ಗೆ ಚರ್ಚೆಯಾಗಲಿ ಎಂದು ಹೇಳುತ್ತಿದ್ದಾರೆ. ನಾವಿಲ್ಲಿ ಮನಸ್ಸಿಗೆ ಬಂದಿದ್ದನ್ನು ಹೇಳಿಕೊಂಡು ಸಭೆಯ ಸಮಯವನ್ನು ಕಳೆಯಲಿಕ್ಕೆ ಬಂದಿದ್ದೇವೆಯೇ ? ಇಲ್ಲಿ ಒಬ್ಬೊಬ್ಬರದು ಒಂದೊಂದು ರೀತಿ ಅಭಿಪ್ರಾಯವಾದರೆ ಅದು ಕೊನೆಗಾಣುವುದೆಂತು ? ನಾವು ಸಭೆಯ ನಿಯಮಗಳನ್ನು ಪಾಲಿಸಿ. ಆದರಂತೆ ನಡೆದುಕೊಳ್ಳಬೇಕಾಗುತ್ತದೆ.

MR. SPEAKER.—If the House wants entire discussion either today or tomorrow I cannot prevent. I leave it to the House. When the House wants it, I have to go by the desire of the House. The hon'ble members must know the value of time and they should co-operative with me.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಶಂಕರರಾವ್ ಅವರು ಈ ವಿಷಯವನ್ನು ಬಹಳ ಹಗುರವಾಗಿ ತೆಗೆದುಕೊಂಡಂತೆ ಕಾಣುತ್ತಿದೆ. ಇಲ್ಲಿ ನಾವು ಮಾನ್ಯ ಸಭೆಯ ಕಾಲವನ್ನು ವಿನಾಕಾರಣ ಕಳೆಯುತ್ತಿಲ್ಲ. ಸಭೆಯ ಮುಂದಿರುವ ವಿಚಾರ ಬಹಳ ಗಂಭೀರವಾದುದು. ಮಾನ್ಯ ಸದಸ್ಯರು ಇದನ್ನು ಅಷ್ಟೊಂದು ಹಗುರವಾಗಿ ತೆಗೆದುಕೊಳ್ಳಬಾರದೆಂದು ನನ್ನ ಪ್ರಾರ್ಥನೆ. It is a most important issue.

MR. SPEAKER.—The hon'ble member Sri G. P. Vadeyaraj has given notice seeking for some information and the Minister was to reply. In the meantime a few members wanted to speak. The hon'ble member must know the value of time of the House. I have placed the matter before the House and I appeal to the hon'ble members to see that this matter is concluded as early as possible. The hon'ble member Sri H. D. Deve Gowda raised the point that other matters printed in the Agenda are not taken up first. It was because Sri G. P. Vadeyaraj has given notice stating that necessary orders should be issued today as other wise there will be more difficulty to Scheduled Caste students and the Hon'ble Minister also had consented and he was ready with reply, I permitted him to raise the matter in view of its urgency.

೩-೦೦ ಪಿ.ಎಂ.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಅಧ್ಯಕ್ಷರ ಮುಖೇನ ಹಾವನೂರ ಸಾಹೇಬರಿಗೆ ವಂದಿಸುತ್ತೇನೆ. ಬಹಳ ಕಾಲದಿಂದ ೫ ಪರ್ಸೆಂಟ್ ಜನಾಂಗ ಮುಂದುವರಿದಿದ್ದು ಇದ್ದು ಇವತ್ತು ೧೮ ಪರ್ಸೆಂಟ್ ಕೊಟ್ಟಿರುವುದರಿಂದ ಮಾನ್ಯ ಮಂತ್ರಿಗಳನ್ನು ವಂದಿಸಬೇಕಾಗಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಮಿಲ್ ಮಾಲೀಕರು ಸಿನಿಮಾ ಥಿಯೇಟರ್ ಮಾಲೀಕರು ಇವತ್ತು ಇವರು ಜಂಗಮ ಜಾತಿಗೆ ಸೇರದವರು, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಕ್ಯಾಸ್ಟ್‌ನಲ್ಲಿ ಸರ್ಟಿಫಿಕೇಟ್ ತೆಗೆದು ಕೊಳ್ಳುತ್ತಿದ್ದಾರೆ. ಇನ್ನೊಂದು ವಿಚಿತ್ರ ಏನು ಎಂದರೆ ಶೂಲೆಗಾರ ಎನ್ನುವ ಜಾತಿಯವರು. ಗುಂಡಪ್ಪ ಕಮಿಟಿ ಬರುವುದಕ್ಕೆ ಮುಂಚೆ ಇವರು ಬ್ರಾಹ್ಮಣರು ಎಂದು ಹೇಳಿಕೊಳ್ಳುತ್ತಿದ್ದರು. ಗಾಯತ್ರಿ ಮಂತ್ರ ಪಠಿಸುತ್ತಿದ್ದರು. ಇವತ್ತು ಇವರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಹೆಸರಿನಲ್ಲಿ

ಬೇಕಾದಷ್ಟು ಸರ್ಟಿಫಿಕೇಟುಗಳನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಎಷ್ಟೋ ಸರ್ಟಿಫಿಕೇಟುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿದ್ದಾರೆ. ಇದರಿಂದ ನಮಗೆ ಬಹಳ ಆಶ್ಚರ್ಯವಾಗುತ್ತಿದೆ. ಇಂಥ ಒಂದು ಅನಾಮಲಿ ಇಟ್ಟುಕೊಂಡರೆ ನಿಜವಾಗಿಯೂ ನಾವು ಯಾವ ಜನಾಂಗಕ್ಕೆ ಸಹಾಯ ಮಾಡ ಬೇಕಾಂತ ಉದ್ದೇಶ ಇಟ್ಟುಕೊಂಡಿದ್ದೇವೋ ಆ ಸಹಾಯ ಅವರಿಗೆ ದೊರೆಯುವುದಿಲ್ಲ.

ಇನ್ನು ಎರಡನೆಯದಾಗಿ ಹಿಂದುಳಿದ ವರ್ಗ ಮತ್ತು ಹಿಂದುಳಿದ ಜಾತಿ, ಹರಿಜನರು ಮತ್ತು ಗಿರಿಜನರು ಯಾರು ಇದ್ದಾರೆ. ಸಾಮಾಜಿಕವಾಗಿ ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ. ಅಂತಹವರಿಗೆ ಸರ್ಕಾರದ ಸವಲತ್ತುಗಳು ಸಿಗುವಂತ ವ್ಯವಸ್ಥೆಯಾಗಬೇಕು. ನಮ್ಮ ನಾಯಕರಾದ ಬಸವಲಿಂಗಪ್ಪನವರ ಮಕ್ಕಳಿಗೂ ನಮ್ಮ ಊರಿನಲ್ಲಿರುವ ಹರಿಜನ ವ್ಯಕ್ತಿಯ ಮಕ್ಕಳಿಗೂ ಒಂದೇ ರೀತಿಯ ಸವಲತ್ತು ಎಂದರೆ ಅವರಿಗೆ ನ್ಯಾಯ ಸಿಗುವುದೆಲ್ಲಿ ? ಇವತ್ತು ಹಳ್ಳಿಗಳಲ್ಲಿರತಕ್ಕ ಹರಿಜನರು ಗಿರಿಜನರು ಮೊದಲು ಇದ್ದ ಸ್ಥಿತಿಯಲ್ಲಿಯೇ ಇದ್ದಾರೆ. ದಯವಿಟ್ಟು ಈ ತಾರತಮ್ಯವನ್ನು ಹೋಗಲಾಡಿಸಬೇಕೆಂಬುದೇ ನನ್ನ ವಾದ.

SRI C. M. ARUMUGHAM (K.G.F.).—Sir, I am not going to take much time. These matters have been brought for issue of a direction classifying these people as Scheduled castes and that arrangements be made to issue certificates so that they could admit their children in schools. The Hon'ble Minister for Law, Social Welfare and Backward Classes Sri L. G. Havanur said that he fully agrees with the view of the hon. members. He also sympathised with the members. He further said that he has directed the officers to issue the orders.

SRI L. G. HAVANUR —Sir, I did not say that the officers are coming in the way. I said that there are certain procedural hurdles. If I allow this objection to be raised, there would be a discussio n which would be unending and I am likely to be misrepresented to the public, to the House and also to the officers. What I said was that there are some procedural hurdles that were pointed out by my officers. I assure the House that I am competent to overcome those hurdles. I did not make any allegations against the officers of my department or other officers.

SRI C. M. ARUMUGAM.—Sir, the Hon'ble Minister of State Sri K. H. Srinivas has stated that whenever he issues orders, the officers come in the way and the files are not moving as fast as he thinks and that the bureaucracy comes in the way. I want to know who is the authority to direct the issue of orders, who has got the power to rule. Sir, I feel that there are two Governments in this State. (1) the I.A.S. Officers' Government, and (2) Politicians' Government. Whenever the Politicians' Government issues orders, the I.A.S. Officers come in the way. I want to know whether these I A.S. Officers are running the Government? I would say that this Government is a 'Sudra Government'. Is the Government classified as 'Sudra Government' ? It is not carried out by the I.A.S. Officers. I think it is not a 'Sudra Government'. The I.A.S. officers think that this is a 'Sudra Government' and therefore they come in the way. Whenever

matters concerning SC/STs are referred to them, they are not acting well and they are coming in the way. The Government can suspend such officers. I will raise this issue tomorrow by giving a notice. Are these officers so big as to impeach the House? Can the Government show an instance where an I.A.S. officer has been suspended. My friend said that the matter pertains to harizans. I oppose the word 'harizans'. Whenever the problem pertaining to this section of the society, which forms one-fifth of the population of the State, is referred to them, these officers always come in the way. They are a stumbling block for the progress of the Scheduled caste of the State. They call themselves as Commissioners and Secretaries.

I congratulate the Government who have ordered reservations for this section of the society in promotions also. But what is it that the officers have done ? They have put one ward 'suitability'. What is suitability ? For the informrtion of the House, I would like to quote one instance, A candidate from Bhadravati, who has passed all subjects in First Class, and is a rank holder, appeared before the Union Public Service Commission for Indian Forest Service. He was rejected because he has no personality.

MR. SPEAKER.—The hon. member may discuss this when the Demands of the Social Welfare department are taken up.

SRI C. M. ARUMUGHAM.—Sir, the process takes six months. What should happen to the people till then ? Therefore, I say that the matter raised by the hon. member Sri G P. Wadeyaraj is very important and it should be taken up now only.

SRI L. G. HAVANUR.—Sir, though it is my first experience, I feel that the emotion with which some of the hon. members have raised this issue concerning the problems of SC/STs. and I would only say that I share the feelings of every one of those who spoke for the upliftment of the SC/STs. Though the question was raised abruptly, I think I will be able to give a brief answer. Now that complicated questions have been raised and I have been called upon to make a speech, I feel that I should be very brief. Neverthless, I shall try to give relevant and proper answers. With regard to the first question that has been raised by Sri G. P. Wadeyaraj, I wish to state that we have taken all possible measures, measures at our command, to remedy the defect, and I assure my hon. friend Sri G. P. Wadeyaraj and also the House that we shall take a decision regarding this as expeditiously as possible.

Regarding Sri Bommai's objection that corruption is rampent in some of the departments particularly while issuing caste certificates, My reply to him is that government departments and government officers

being part of our society, in its totality corruption cannot be eliminated entirely. However if instances are brought to my notice I shall take measures to prevent officers resorting to corrupt practices.

Sri H. D. Deve Gowda said that some persons not belonging to Kadu Kuruba or Golla community are getting the caste certificates. Similarly, Sri J. H. Patel took objection to the criteria that we are adopting in the specification of Scheduled Castes and Scheduled Tribes. No doubt some people do take advantage of the similarity of caste names by making false representation, certificates are being obtained and consequential benifits also being taken by them. But I should say that there can be no universal criterion either in the identification of Scheduled Castes or Sheduled Tribes or in the identification of other backward Classes. As far as possible the President of India and later the Parliament took the opinion of the concerned local governments for specification of SCs and STs and it is proved that some castes which are not traditionally untouchables have been included in the list of SCs and no member of this Hon. House took objection. When I say that the sole criterion in the specification of SCs was the stigma of untouchability that was attached to a particular caste in the Hindu community, although the Constitution has abolished the untouchability in practice, there is untouchability with some of the Hindu caste and that appears to be the sole criterion ; before the Constitution was adopted that appears to be sole criterion in the specification of the depressed classes as they were called before 1935, I as the Chairman of the Backward Classes Commission had made a recommendation to the State Government that the Central Government should be requested to initiate a bill in the Parliament for removing touchable class from the list of SCs and no uniform principles or tests have been adopted in any State in the preparation of the list of SCs and STs. As a result we find some castes which really do not deserve to be included in the list of SCs. Some tribal communities which do not have the known primitive or tribal characteristics are also included in the list of STs. As a result of this, the really deserving among the SCs and the STs have been left in the lurch. I for one would agree with the suggestion made by some of the hon. members for revision of the lists of SCs and STs; but being aware of the limitations of the State Government and the limitations of the State Legislature, I would rather request the members to make an appeal to the Parliament for initiation of a comprehensive Bill so that the undeserving castes and communities now found in the list of SCs and STs. could be eliminated.

Somebody made a faint allegation, when I replied to Sri G. Basavannappa, that I condemned Lingayat community in getting certificates. It was not so. The question was specific and the answe

was specific and I did not say anything more. The obtaining of false certificates is not confined only to Lingayat community and I should say even some Brahmins are obtaining false certificates as though they are tribal community. It is not confined only to Lingayats, it is to be found in almost all non-scheduled communities. The reason is, after the universalisation of education and opening of innumerable schools and colleges, we are producing large number of graduates and they are seeking government service and when they do not get employment elsewhere, it is but natural that they resort to this method of obtaining false certificates for getting the concessions or the benefits that are being extended to the real SCs and STs.

The other point which I should like to clarify is about the issuance of the G.O. concerning the synonymous names of SCs and STs. I have already stated that on my part I have finished the job and the G.O. may be issued either today or tomorrow because some procedural and legal difficulties are being experienced by the officers and the moment I go to my chambers. I shall attend only to that work and to no other work.

I am really thankful to the hon. member Sri J. H. Patel who said that because I have taken up the cause of SCs and STs he warned me that I should be cautious of the consequences of my role. Mr. Patel is not a stranger to me though he may not be knowing very much about me. I may inform him that I have never gone after power and I never sought any political position; and so long I am here I shall do all that is in my powers for the good of the weaker sections unmindful of the consequences to use the same word which my hon. friend Sri Patel used. I shall do all that is in my power for the upliftment of the weaker sections, the weaker sections as I understand.

SRI J. H. PATEL.—I wish him all the best of luck.

ಶ್ರೀ ಎಸ್. ಎಸ್. ಅರಕೇರಿ .—ಮಾನ್ಯ ಮಂತ್ರಿಗಳು ಬಹಳ ಉತ್ತಮವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಸಿನಾನಿಮಸ್ ಜಾತಿಗಳ ಪಟ್ಟಿಯನ್ನು ನಾನು ಆಗಲೇ ಮಾಡಿದ್ದೇನೆ, ಅದು ಈಗಾಗಲೇ ಇಷ್ಯೂ ಮಾಡುವ ಸ್ಟೇಜಿನಲ್ಲಿದೆಯೆಂದು ಹೇಳಿದರು. ಹಳೇ ಮೈಸೂರು ಭಾಗದಲ್ಲಿ ಕೊರಮ ಷೆಡ್ಯುಲ್ಡ್ ಕ್ಯಾಸ್ಟಿನಲ್ಲಿದೆ. ಇದಕ್ಕೆ ಸಿನಾನಿಮಸ್‌ನಲ್ಲಿ ಕೊರವರು ಅಥವಾ ಬಜಂತ್ರಿಯವರು. ಅದು ಈ ಲಿಸ್ಟ್‌ನಲ್ಲಿ ಬರುವುದಿಲ್ಲ. ಸಿನಾನಿಮಸ್ ಕೊಡುವಾಗ ಮನೆತನ, ಅವರ ಉದ್ಯೋಗ, ಜಾತಿ, ಸ್ಪೃಶ್ಯರು ಅಥವಾ ಅಸ್ಪೃಶ್ಯರು ಇವನ್ನೆಲ್ಲಾ ತಿಳಿದುಕೊಂಡು ಸಿನಾನಿಮಸ್ ಮಾಡಬೇಕು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದನ್ನು ಯಾವ ಆಧಾರ ಇಟ್ಟುಕೊಂಡು ಮಾಡಿದ್ದಾರೆ ಎನ್ನುವುದನ್ನು ದಯಮಾಡಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ರೂಲ್ ೩೧೨ರ ಕೆಳಗೆ ನಾನೂ ಕೂಡ ಮುಸ್ಲಿಮ್ಸ್ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ನಾಳೆ ಅಥವಾ ನಾಡಿದ್ದು ಜಿ. ಒ. ಇಷ್ಯೂ ಆಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಆಗದೇ ಹೋದರೆ ಅನೇಕ ಜನ ಮುಸ್ಲಿಮ್ಸ್ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ೬ ಪರ್ಸೆಂಟ್ ಕೊಡಬೇಕು ಎಂದು ಏನು ಶಿಫಾರಸು ಮಾಡಿದ್ದಾರೆ ಇದನ್ನು ಅಧಿಕಾರಿಗಳು ಕಾರ್ಯಗತ ಮಾಡಿಲ್ಲ. ಅನೇಕ ಜನ ವಿಧ್ಯಾರ್ಥಿಗಳಿಗೆ ತಿರಸ್ಕೃತ ಆಗಿದೆ. ಹರಿಜನರಿಗೆ

ಸಂಬಂಧಪಟ್ಟ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದರು. ಇದು ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಪ್ರಶ್ನೆ. ೪೫ ಲಕ್ಷ ಇರತಕ್ಕ ಜನರ ಪ್ರಶ್ನೆ. ಒಬ್ಬ ಮುಸ್ಲಿಮ್‌ರಿಗೂ ಪ್ರವೇಶಾವಕಾಶ ಸಿಕ್ಕಿಲ್ಲ. ಇಂಜಿನಿಯರಿಂಗ್‌ನಲ್ಲಿ ಅವಕಾಶ ಸಿಕ್ಕಿಲ್ಲ. ಎಂ. ಬಿ. ಬಿ. ಎಸ್. ಗೆ ಅಪ್ಲಿಕೇಷನ್ ಕಾಲ್‌ಫಾರ್ ಮಾಡಿದ್ದರು ಅಲ್ಲೂ ಅವಕಾಶ ಸಿಕ್ಕಿಲ್ಲ. ಯೂನಿವರ್ಸಿಟಿಯಲ್ಲೂ ಸ್ಕೋಪ್ ಇಲ್ಲ.

ಅಧ್ಯಕ್ಷರು.—ಈ ವಿಷಯ ಮುಗಿದ ನಂತರ ಕೆಲವು ಕಾಲಿಂಗ್ ಅಟೆನ್‌ಷನ್ ನೋಟಿಸಸ್‌ಗಳಿವೆ.

ಶ್ರೀ ಸಿ. ಎಂ. ಇಬ್ರಾಹಿಂ.—ಇದೂ ಕೂಡ ಹರಿಜನರ ಪ್ರಶ್ನೆಯಷ್ಟೇ ಗಂಭೀರವಾದ ಅಲ್ಪ ಸಂಖ್ಯಾತರ ಪ್ರಶ್ನೆ.

ಅಧ್ಯಕ್ಷರು.—ಇದಾದನಂತರ ಕಾಲಿಂಗ್ ಅಟೆನ್‌ಷನ್ಸ್ ಇವೆ, ಮತ್ತು ೬ ಬಿಲ್‌ಗಳಿವೆ, ಮಾನ್ಯ ಸದಸ್ಯರು ಸಂಬಂಧಪಟ್ಟ ಮಂತ್ರಿಗಳ ಹತ್ತಿರ, ಅವರ ವಿರಾಮ ವೇಳೆಯಲ್ಲಿ ಏನು ಬೇಕೋ ಅದರ ಬಗ್ಗೆ ಮಾತನಾಡಬಹುದು.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ನಾನು ಆ ಸಂಪ್ರದಾಯವನ್ನು ಇಟ್ಟು ಕೊಂಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ತಾವು ಈ ದಿವಸದ ಅಜೆಂಡಾದಲ್ಲಿ ಏನು ವಿಷಯ ನಿಗದಿ ಮಾಡಿದ್ದೀರಿ, ಅದರಲ್ಲಿ ಮಾನ್ಯ ಇಬ್ರಾಹಿಂ ಅವರು ಕೇಳುತ್ತಾ ಇರುವ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿದ್ದೀರಿ.

ಅಧ್ಯಕ್ಷರು.—ಅದು ಬೇರೆ ವಿಚಾರ. ಮಾನ್ಯ ಸದಸ್ಯರಾದ ಇಬ್ರಾಹಿಂರವರು ಯಾವ ವಿಷಯ ವನ್ನು ಕಳುಹಿಸಿದ್ದಾರೆ ಅದನ್ನು ಸಾಧ್ಯವಾದಷ್ಟು ಆರ್ಡರ್ ಪ್ರಕಾರ ಅಜೆಂಡಾದಲ್ಲಿ ಸೇರಿಸಿ ತಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ತಾವು ಹೇಳಿದ ವಿಚಾರ ಗಂಭೀರವಾದ ವಿಚಾರವಾಗಿರಬಹುದು. ತಾವು ಕಾಗದ ಕೊಟ್ಟ ಕೂಡಲೇ ಇಲ್ಲಿ ಚರ್ಚೆಗೆ ಬರಲಿಲ್ಲ ಅಂದರೆ ಸರಿಯಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಒಡೆಯರಾಜ್ ಅವರಿಗೆ ಅವಕಾಶ ಕೊಟ್ಟಿದ್ದೀರಿ, ನನಗೂ ಮಾತನಾಡಲು ಅವಕಾಶ ಕೊಡಿ.

MR. SPEAKER.—The point is for want of time we could not take up.

SRI S. S. ARAKERI.—Sir, in the meanwhile I sought a clarification from the Minister. He was about to give reply. But because of interruptions he could not give the reply. I request him to give the reply.

SRI P. GOVIND VODEYARAJ—I am thankful to the Hon'ble Minister for his prompt action.

SRI M. V. RAJASHEKHARAN.—I thank the Minister. But one specific question I asked is whether the Minister belongs to the backward class or forward class ?

SRI L. G. HAVANUR.—It is a very broad general question, and I should say without hurting the feelings of the Members of this House and also Mr. Rajashekharan, that this sort of questions are going everywhere in a most mischievous manner. The reason is whether one becomes a Minister, Judge or Legislator– he does not lose his caste or community. If I become a Minister I do not lose my caste. Where a caste is scheduled either as Scheduled Caste or Scheduled Tribe, and to which if a particular member belongs, hi

caste or community will not go even if he becomes a Minister, Judge or Legislator. He continues in that caste or backward class or Scheduled Tribe irrespective of his position he holds.

(Some Members stood up to ask questions)

MR. SPEAKER.—I request the House to guide me in this matter. Without co-operation of the Members I can't conduct the deliberations.

SRI K. H. RANGANATH.—Sir, the agenda may kindly be followed because some of us have to go to the other House. I have been waiting since one hour.

(Two or three Members rose to speak)

*** *** ***

MR. SPEAKER.—In this way we can't transact any business. When two or three Members are standing the House will not be in order and nothing could be recorded. Don't take down.

*** *** ***

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸಭಾಧ್ಯಕ್ಷರೇ, ದಯವಿಟ್ಟು ನನಗೆ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ನಾನು ಬಹಳ ವಿನಯವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

MR. SPEAKER.—We will take it up tomorrow.

3-30 P. M.

Calling Attention to matters of urgent Public Importance

re : Kannada as a Compulsory Language from VIII Standard in Marathi and Urdu High Schools.

SRI B. B. SAYANAK (Belgaum).—Sir, I call the attention of the Minister for Education to the situation arising out of the policy of the Government in making Kannada as compulsory Language from VIII Standard in Marathi and Urdu High Schools.

SRI B. SUBBAIAH SHETTY (Minister for Education).—Sir, I wish to make the following statement :

The Karnataka State has been following the three Language formula. Most of the students study Kannada as first language, English as II Language and Hindi as III Language.

Kannada has not been made compulsory from VIII Standard in Marathi, Urdu High Schools in place of Hindi.

*** Matter not recorded as ordered by the Chair.